ಕೊಟ್ಟು, ಆ ಪ್ರದೇಶದಲ್ಲಿ ಯಾವ ರೀತಿಯಾಗಿ ಜನಸಾಮಾನ್ಯರಿದ್ದಾರೆ, ಅಲ್ಲಿಯ health system ಹೇಗಿದೆ ಎಂಬ ಬಗ್ಗೆ ಆಲೋಚನೆ ಮಾಡಿಕೊಂಡು, ಕೇಂದ್ರ ಸರ್ಕಾರದಿಂದ ನಮಗೆ ಬರುವ ಬೇರೆ ಬೇರೆ ಯೋಜನೆಗಳ ಅಡಿಯಲ್ಲಿ ಅಲ್ಲಿ ಅತ್ಯುತ್ತಮವಾದ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು Maternity Hospital ಅನ್ನು ಖಂಡಿತವಾಗಿ ನಿರ್ಮಾಣ ಮಾಡಿಕೊಡುತ್ತೇವೆ.

7) **ವಿಷಯ : Indo-German multi skill development Centre ಅನ್ನು ಬೇರೆ ಕಡೆಗೆ ಸ್ಥಳಾಂತರಿಸದೆ ಮಂಗಳೂರಿನಲ್ಲೇ ಮುಂದುವರೆಸುವ ಬಗ್ಗೆ.**

ಶ್ರೀ ಜೆ.ಆರ್.ಲೋಬೋ (ಮಂಗಳೂರು ನಗರ ದಕ್ಷಿಣ) :– ಮಾನ್ಯ ಅಧ್ಯಕ್ಷರೆ, ಮಂಗಳೂರಿನ ಸರ್ಕಾರಿ ITI ಸಂಸ್ಥೆಯಲ್ಲಿ Indo-German multi skill development Centre ಎಂಬುದೊಂದು ಇದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದಲ್ಲಿ ಸುಮಾರು 48 ಕೋಟಿ ರೂ.ಗಳ ವೆಚ್ಚದಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲು ಕಳೆದ ವರ್ಷ ಮಂಜೂರು ಮಾಡಲಾಗಿತ್ತು. ಈ ದಿಸೆಯಲ್ಲಿ ಈಗಾಗಲೇ ಕೆಲಸಗಳು ಪ್ರಾರಂಭವಾಗಿವೆ. ಈ ಕೇಂದ್ರವನ್ನು ನಡೆಸಲು ಬೇಕಾಗಿರುವಂತಹ ಕಟ್ಟಡಕ್ಕೆ ಸುಮಾರು 30 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿತಿ ಕೇಂದ್ರದಿಂದ interior ಕೂಡ ಆಗಿದೆ. ಕೇಂದ್ರ ಸ್ಥಾಪನೆ ಮಾಡಲು ಕ್ರಮ ಜರುಗಿಸಲಾಗಿದೆ. ಆದರೆ ಇತ್ತೀಚೆಗೆ ಈ ಕೇಂದ್ರವನ್ನು ಇಲ್ಲಿಂದ ಬಳ್ಳಾರಿ ಜಿಲ್ಲೆಗೆ ವರ್ಗಾಯಿಸಲಾಗುತ್ತದೆ ಎಂದು ತಿಳಿದು ಬಂದಿದೆ. ದಯಮಾಡಿ, ಈ ರೀತಿಯ ಪ್ರಸ್ತಾವನೆಯಿದ್ದರೆ, ಸರ್ಕಾರವು ಇದನ್ನು ನಿಲ್ಲಿಸಬೇಕಾಗಿದೆ. ಮಂಗಳೂರಿನ ಕೇಂದ್ರವನ್ನು ಮಂಗಳೂರಿನಲ್ಲೇ ಮುಂದುವರೆಸಬೇಕು, ಉಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ [ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನೆ ಸಚಿವರು]:– ಮಾನ್ಯ ಅಧ್ಯಕ್ಷರೆ, ಮಾನ್ಯ ಜೆ.ಆರ್.ಲೋಬೋರವರು ಪ್ರಸ್ತಾಪಿಸಿರತಕ್ಕ ಪ್ರಶ್ನೆಯನ್ನು ಸರ್ಕಾರ ಗಮನಿಸಿದೆ. ಅವರ ಅಹವಾಲನ್ನು ಮಾನ್ಯ

ಕಾರ್ಮಿಕ ಸಚಿವರ ಪರವಾಗಿ ಸ್ವೀಕಾರ ಮಾಡಿದ್ದೇನೆ. ನಾಳೆ ಅವರ ಕಡೆಯಿಂದ ಉತ್ತರ ಕೊಡಿಸುತ್ತೇನೆ.

8) ವಿಷಯ : ರಾಮತಾಳ್ ಮರೋಳ್ ಏತ ನೀರಾವರಿ ಯೋಜನೆಯಲ್ಲಿ ಕಳಪೆ ಕಾಮಗಾರಿ ಆಗಿರುವ ಕುರಿತು ಕ್ರಮ ಜರುಗಿಸುವ ಬಗ್ಗೆ.

ಶ್ರೀ ಕಾಶಪ್ಪನವರ್ ವಿಜಯಾನಂದ್ ಶಿವಶಂಕರಪ್ಪ (ಹುನಗುಂದ):- ಮಾನ್ಯ ಅಧ್ಯಕ್ಷರೆ, ನನಗೆ ನಾಲ್ಕು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊಟ್ಟಮೊದಲು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಹುನಗುಂದ ತಾಲ್ಲೂಕಿನ Ramthal [Marol] ಏತ ನೀರಾವರಿ ಯೋಜನೆ 2003ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ಪಡೆದು ಪ್ರಾರಂಭಗೊಂಡಿದ್ದು, ಇವತ್ತಿನವರೆಗೂ ಆ ನೀರಾವರಿ ಯೋಜನೆ ಪೂರ್ಣಗೊಂಡಿಲ್ಲ ಮತ್ತು ಅಲ್ಲಿ ಗುಣಮಟ್ಟದ ಕೆಲಸಗಳಾಗಿಲ್ಲ. ಅಲ್ಲಿ ಸಂಪೂರ್ಣವಾಗಿ ಕಳಪೆ ಗುಣಮಟ್ಟದ ಕಾಮಗಾರಿಯಾಗಿದೆ. ದಯವಿಟ್ಟು ನಾನು ಸದನಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ಸಂಪೂರ್ಣವಾಗಿ ಆ ಏತ ನೀರಾವರಿ ಯೋಜನೆ ಕಳಪೆ ಗುಣಮಟ್ಟದ್ದಾಗಿರುವುದರಿಂದ, ಅದರ ಬಗ್ಗೆ ಸೂಕ್ತ ತನಿಖೆ ಮಾಡಿಸಬೇಕು. ನಮ್ಮ ಹುನಗುಂದ ತಾಲ್ಲೂಕಿನ ರೈತರಿಗೆ ಆ ಏತ ನೀರಾವರಿ ಯೋಜನೆ ಬಹಳ ಮಹತ್ವದ್ದಾಗಿದೆ. ಆದ್ದರಿಂದ, ಅದರ ಬಗ್ಗೆ ಸಂಪೂರ್ಣವಾಗಿ ತನಿಖೆ ಮಾಡಿಸಿ, ಆಗಿರುವಂತಹ ನಷ್ಟವನ್ನು ತುಂಬಿ, ಸರಿಯಾಗಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ [ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನೆ ಸಚಿವರು]:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು Ramthal [Marol] ಏತ ನೀರಾವರಿ ಯೋಜನೆಯಲ್ಲಿ ಕಳಪೆ ಕಾಮಗಾರಿಯಾಗಿದೆ ಎಂದು ಪ್ರಸ್ತಾಪಿಸಿರುವುದರ ಬಗ್ಗೆ ನಾಳೆ ಮಾನ್ಯ ಸಣ್ಣ ನೀರಾವರಿ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

ಅಧ್ಯಕ್ಷರು :- ಮುಂದಿನ ವಿಷಯವನ್ನು ಮಾನ್ಯ ಹೆಚ್.ಕೆ.ಕುಮಾರಸ್ವಾಮಿಯವರು ಪ್ರಸ್ತಾಪಿಸಬೇಕು.